**ಸಾಕ್ಷಿಯನ್ನು ದಿನಾಂಕ *10.02.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಬಂಗಾರದ ಸರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ-2 ಎಂದು ಗುರುತಿಸಲ್ಪಟ್ಟಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ದೂರನ್ನು ಓದಿ ಪರಿಶೀಲನೆ ಮಾಡಿದ್ದೆ. ದೂರಿನ ಪ್ರಕಾರ 2010 ರಲ್ಲಿ ರೈಲ್ವೆ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿರುವ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ಅದೇ ದೂರಿನಲ್ಲಿ 2013 ನೇ ಇಸವಿಯಲ್ಲಿ ರೈಲ್ವೆ ಇಲಾಖೆಯಲ್ಲಿ ಪರೀಕ್ಷೆ ತೆಗೆದುಕೊಂಡ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. 2013 ನೇ ಇಸವಿಯಲ್ಲಿ ಪರೀಕ್ಷೆ ತೆಗೆದುಕೊಂಡ ಮೇಲೆ ಪರೀಕ್ಷೆಯ ಪಲಿತಾಂಶ ಏನು ಆಗಿರುತ್ತದೆ ಎಂದು ನಾನು ತನಿಖೆ ಮಾಡಿರುವುದಿಲ್ಲ. ನಾನು ಈ ಬಗ್ಗೆ ರೈಲ್ವೆ ಇಲಾಖೆಯ ಯಾವುದೇ ಅಧಿಕಾರಗಳನ್ನು ಸಂಪರ್ಕಿಸಿ ಈ ಬಗ್ಗೆ ಮಾಹಿತಿ ಪಡೆದುಕೊಂಡಿರುವುದಿಲ್ಲ. ಚಾಸಾ-3 ಮತ್ತು 4 ರವರು ರೈಲ್ವೆ ಇಲಾಖೆಯಲ್ಲಿ ಯಾವ ಕೆಲಸಕ್ಕಾಗಿ ಪರೀಕ್ಷೆ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪ್ರ.ವ.ವರದಿಯಲ್ಲಿ ಘಟನೆ ದಿನಾಂಕ 01.01.2013 ರಿಂದ 07.06.2015 ರ ಮಧ್ಯದ ಅವಧಿಯಲ್ಲಿ ಆಗಿರುತ್ತದೆ ಎಂದು ಹೇಳಿದ್ದು ಆ ಅವಧಿಯಲ್ಲಿ ಏನು ಆಗಿರುತ್ತದೆ ಎನ್ನುವ ಬಗ್ಗೆ ಸಾಕ್ಷಾಧಾರಗಳನ್ನು ಪಡೆದುಕೊಂಡಿರುತ್ತೇನೆ. ಯಾವ ಯಾವ ಸಾಕ್ಷಾಧಾರಗಳು ಎಂದು ಹೇಳಲು ಆಗುವುದಿಲ್ಲ. ದೂರಿನಲ್ಲಿ ದಿನಾಂಕ 18.06.2011 ರಂದು

ರವಿ ಅವರ ಖಾತೆಗೆ 3,50,000/– ರೂಗಳನ್ನು ಜಮಾ ಮಾಡಿದ್ದಾರೆ ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ. ದಿನಾಂಕ 18.06.2011 ರಿಂದ 08.06.2015 ರ ವರೆಗೆ ಪಿರ್ಯಾದುದಾರರ ಮತ್ತು ಆರೋಪಿತರ ನಡುವೆ ಯಾವುದೇ ಸಂಪರ್ಕ ಇರಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜಿ. ರವಿ ನನಗೆ ಪರಿಚಯ ಇದ್ದಂತಹ ವ್ಯಕ್ತಿ ಮತ್ತು ಸ್ನೇಹಿತರ ಇರುತ್ತಾರೆ ಎಂದರೆ ಸರಿಯಲ್ಲ. ಜಿ. ರವಿ ಪ್ರಭಾವಿ ರಾಜಕಾರಣಿಗಳ ಲಿಂಕ್ ಇಟ್ಟುಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ರಾಜಕಾರಣಿಗಳ ಲಿಂಕ್ ಇಟ್ಟುಕೊಂಡಿದ್ದರು ಆದರೆ ಯಾವ ಯಾವ ರಾಜಕಾರಣಿಗಳು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 2015 ನೇ ಇಸವಿಯಲ್ಲಿ ಜಿ ರವಿ ಮೈಸೂರಿನ ಸಿರಿ ನ್ಯೂಸ್ ಚಾನಲ್ ನಲ್ಲಿ ವ್ಯವಸ್ಥಾಪಕರಾಗಿದ್ದರು ಎಂದರೆ ಸರಿ. ಈ ಪ್ರಕರಣದ ಪಿರ್ಯಾದುದಾರರು ಸಹ ಅದೇ ಸಿರಿ ನ್ಯೂಸ್ ಚಾನಲ್ ನಲ್ಲಿ ಮುಖ್ಯ ವರದಿಗಾರರಾಗಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ–2 ನಂಜುಂಡಸ್ವಾಮಿರವರು ಸಹ ಅದೇ ಸಿರಿ ನ್ಯೂಸ್ ಚಾನಲ್ ನಲ್ಲಿ chief editor ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ– 3 ರಿಂದ 5 ರವರು ಜಿ . ರವಿ ಅವರ ಬಳಗಕ್ಕೆ ಸೇರಿದವರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜಿ. ರವಿ ರವರು National Textile ನ ಸದಸ್ಯರಾಗಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಜಿ ರವಿ ರವರನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆ ಯ ಸಂಬಂಧವಾಗಿ ಕರೆಸುತ್ತಿದ್ದೆ. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ 2011 ನೇ ಇಸವಿಯಲ್ಲಿ ದಾಖಲಾಗಿದ್ದೆ ಎಂದರೆ ಸರಿಯಲ್ಲ. ನನ್ನದು ಮೈಸೂರಿನಲ್ಲಿ ಸ್ವಂತ ಮನೆ ಇದ್ದು ಆ ಮನೆಯನ್ನು 2011 ರಲ್ಲಿ ಗೃಹಪ್ರವೇಶ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2005 ನೇ ಇಸವಿಯಲ್ಲಿ ಗೃಹಪ್ರವೇಶ ಮಾಡಿರುತ್ತೇನೆ. ನಾನು ಈಗ ನೋಡುತ್ತಿರುವ

ಫೋಟೋದಲ್ಲಿ ನಾನು ಮತ್ತು ನನ್ನ ಕುಟುಂಬ ವರ್ಗ ಇರುತ್ತೇವೆ ಎಂದರೆ ಸರಿ. ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋವನ್ನು **ನಿಡಿ-11** ಎಂದು ಗುರುತಿಸಲಾಯಿತು. ನಿಡಿ-11ರಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಇರುತ್ತಾರೆ ಎಂದರೆ ಸರಿ. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ರವಿ ಇರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋವನ್ನು **ನಿಡಿ-12 ರಿಂದ 14** ಎಂದು ಗುರುತಿಸಲಾಯಿತು.

ಈ ಪ್ರಕರಣ ಆಗುವ ಪೂರ್ವದಲ್ಲಿ ಜಿ.ರವಿ ರವರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನ ಮೇಲೆ ದೂರು ಕೊಟ್ಟಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಜಿ.ರವಿ ರವರಿಗೆ ಪ್ರಭಾವಿ ರಾಜಕಾರಣಿಗಳ ಸಂಪರ್ಕ ಇದ್ದುದರಿಂದ ಸಾಕಷ್ಟು ಜನರಿಗೆ ಮೋಸ ಮಾಡಿದ್ದು ಆ ರೀತಿ ಮೋಸ ಹೋಗಿದ್ದವರ ಪೈಕಿ ಆರೋಪಿತನು ಸಹ ಇದ್ದ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಬಗ್ಗೆ ಆರೋಪಿ ರೇಣುಕೇಗೌಡ ತನಿಖೆ ಸಂದರ್ಭದಲ್ಲಿ ನನಗೆ ತಿಳಿಸಿದ್ದ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸಲು ಮಹದೇವ ಮೂರ್ತಿ ಕಾರಣಕರ್ತ ಇರಲಿಲ್ಲ ಜಿ ರವಿ ಕಾರಣಕರ್ತ ಇದ್ದ ಎಂದರೆ ಸರಿಯಲ್ಲ. ನಾನು ಜಿ.ರವಿ ರವರ ಜೊತೆ ಶಾಮೀಲಾಗಿ ಈ ಪ್ರಕರಣ ವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನ್ಯಾಯಾಲಯದ ಮುಂದಿರುವ ಪಾರ್ಕಿನ ಹತ್ತಿರ ನಡೆದಿರುತ್ತದೆ ಎಂದರೆ ಸರಿ. ಆ ಪಾರ್ಕಿನ ಹತ್ತಿರ ಜನಗಳು ಓಡಾಡುವ ಸಂಪರ್ಕ ಜಾಸ್ತಿ ಇರುತ್ತದೆ ಎಂದರೆ ಸರಿ. ಪಾರ್ಕಿನಿಂದ ನಮ್ಮ ಪೊಲೀಸ್ ಠಾಣೆಗೆ 400-500 ಮೀಟರ್ ದೂರ ಎಂದರೆ ಸರಿ. ಮಹದೇವಮೂರ್ತಿ ರವರು ದಿನಾಂಕ 07.06.2015 ರಂದು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 07.06.2015 ರಂದು ಯಾವುದೇ ಘಟನೆ ನಡೆಯದೇ ಇದ್ದರೂ ಸಹ ದಿನಂಕ

09.06.2015 ರಂದು ನಿಪಿ-2 ರ ಪ್ರಕಾರ ಸುಳ್ಳು ಮಹಜರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ಕೊಡುವ ಸಂದರ್ಭದಲ್ಲಿ ಆರೋಪಿತರ ವಿಳಾಸದ ಬಗ್ಗೆ ಮಾಹಿತಿ ಕೊಟ್ಟಿದ್ದರು. ದೂರಿನಲ್ಲಿ 15 ಗ್ರಾಂ ಚಿನ್ನದ ಸರ ಕಳುವು ಆಗಿರುತ್ತದೆ ಎನ್ನುವ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಆ ಸರವನ್ನು ಅಮಾನತ್ತು ಪಡಿಸಿಕೊಂಡಾಗ ಆ ಸರ ಕಟ್ ಆಗಿದ್ದರ ಬಗ್ಗೆ ಜಖಂ ಆಗಿದ್ದರ ಬಗ್ಗೆ ನೋಡಿದ್ದೆ ಈಗ ನೆನಪಲ್ಲಿ ಇರುವುದಿಲ್ಲ. ನಾನು ಈಗ ನೋಡುತ್ತಿರುವ ಎಂ.ಒ-2 ರ ಮೇಲೆ ಜಖಂ ಆಗಿರುವುದು ಅಥವಾ ಕಟ್ ಆಗಿರುವುದು ಕಾಣಿಸುತ್ತಿರುವುದಿಲ್ಲ. ಈ ಕೇಸಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಪಿರ್ಯಾದುದಾರರಿಂದ ಮತ್ತು ಜಿ.ರವಿ ರವರಿಂದ ಎಂ.ಒ-2 ಅನ್ನು ತರಿಸಿ ಪ್ರಕರಣ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಂ.ಒ-2 ಆರೋಪಿತನ ಸ್ವಾಧೀನದಲ್ಲಿ ಇತ್ತು ಎಂದು ಹೇಳಿ ಸುಳ್ಳು ಮಹಜರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರು ಕೊಡುವ ವೇಳೆಯಲ್ಲಿ ದೂರಿನಲ್ಲಿ ಪಿರ್ಯಾದುದಾರರ ತನಗೆ ಗನ್ ಅನ್ನು ತೋರಿಸಿ ಬೆದರಿಕೆ ಹಾಕಿ ನನ್ನಿಂದ ಚಿನ್ನದ ಸರ ಕಿತ್ತುಕೊಂಡಿದ್ದರು ಎಂದು ಹೇಳಿರುವುದಿಲ್ಲ ಮರು ಹೇಳಿಕೆಯಲ್ಲಿ ಹೇಳಿರುತ್ತಾರೆ. ಆರೋಪಿ ವಿರುದ್ದವಾಗಿ ಗುರುತರವಾದ ಆರೋಪವನ್ನು ಮಾಡುವ ಸಲುವಾಗಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಬೆಳಗಾಂನಿಂದ ಮೈಸೂರಿಗೆ ಯಾವಾಗ, ಯಾವ ವಾಹನದಲ್ಲಿ ಬಂದಿದ್ದರು ಎಂದು ವಿಚಾರ ಮಾಡಿದ್ದೆ ಈ ಬಗ್ಗೆ ಸಾಕ್ಷಾಧಾರಗಳು ಇರುವುದಿಲ್ಲ. ಗನ್ ಲೈಸೆನ್ಸ್ ಹೊಂದಿರುವ ಗನ್ ಎಂದರೆ ಸರಿ. ನಾನು ಈ ಬಗ್ಗೆ ಜಿಲ್ಲಾಧಿಕಾರಿಯವರಿಂದ ಮತ್ತು ಪೊಲೀಸರಿಂದ ಪತ್ರ ವ್ಯವಹಾರವನ್ನು ಮಾಡಿ ಮಾಹಿತಿ ತೆಗದುಕೊಂಡಿದ್ದೆ ಎಂದರೆ ಸರಿ. ದಿನಾಂಕ 25.05.2015 ರಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗನ್ ಅನ್ನು ಪೊಲೀಸ್ ಠಾಣೆಯಲ್ಲಿ

ಡಿಪೋಸಿಟ್ ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಘಟನೆ ಆಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಗನ್ ಆರೋಪಿತ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ–3 ರಿಂದ 5 ರವರು ರೈಲ್ವೆ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದರು ಎನ್ನುವ ಬಗ್ಗೆ ರೈಲ್ವೆ ಇಲಾಖೆಯಿಂದ ಅಥವಾ ಸಾಕ್ಷಿದಾರರಿಂದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಶ್ರೀಕಾಂತ್ ರವರು ತಮ್ಮ ಹೇಳಿಕೆಯಲ್ಲಿ ತಾನು ತನ್ನ ವಾಹನಗಳನ್ನು ರೈಲ್ವೆ ಇಲಾಖೆಗೆ ಬಾಡಿಗೆಗೆ ಕೊಡುತ್ತಿದ್ದೆ ಆ ವೇಳೆಯಲ್ಲಿ ಕಂಟೋನ್ಮೆಂಟ್ ಕಛೇರಿಗೆ ಹೋಗುತ್ತಿದ್ದಾಗ ಆರೋಪಿತರ ಪರಿಚಯ ಬೆಂಗಳೂರಿನ ಕಂಟೋನ್ಮೆಂಟ್ ಕಛೇರಿಯಲ್ಲಿ ಆಗಿತ್ತು ಎಂದು ಹೇಳಿರುವುದಿಲ್ಲ. ಜಿ.ರವಿ ರವರು ಆರೋಪಿತನಿಗೆ ಹಣ ಪಾವತಿ ಮಾಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಜಿ. ರವಿ ರವರ ಖಾತೆಗೆ ಏಕೆ ಹಣ ಹಾಕಿದ್ದರು ಎನ್ನುವ ಬಗ್ಗೆ ಸಾಕ್ಷಾಧಾರಗಳನ್ನು ಸಂಗ್ರಹಿಸಿರುವುದಿಲ್ಲ. ಆರೋಪಿತರು ಜಿ. ರವಿ ರವರ ಖಾತೆಗೆ 3,50,000/–ರೂ ಹಣವನ್ನು ಹಾಕಿರುತ್ತಾರೆ. ನಾನು ಆರೋಪಿತನಿಗೆ 3,50,000/–ರೂ ಹಣವನ್ನು ಜಿ ರವಿ ರವರ ಖಾತೆಗೆ ಏಕೆ ಹಾಕಿರುತ್ತೀರಿ ಎನ್ನುವ ಬಗ್ಗೆ ಕೇಳಿದ್ದೆ. ಈ ಬಗ್ಗೆ ಪ್ರತ್ಯೇಕವಾದ ಹೇಳಿಕೆಯನ್ನು ಮಾಡಿಕೊಂಡಿದ್ದೆನು. 3,50,000/– ರೂಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಅದು ಅವರ ವ್ಯವಹಾರ ಇರುತ್ತದೆ. ನಾನು ಅಮಾನತ್ತು ಪಡಿಸಿಕೊಂಡಿದ್ದೆ ಎಂದು ಹೇಳಿರುವ ಹಾಲ್ ಟಿಕೇಟ್ ನಿಪಿ–17 genuine document or fake document ಎನ್ನುವ ಬಗ್ಗೆ ರೈಲ್ವೆ ಅಧಿಕಾರಿಗಳಿಂದ ವಿಚಾರಣೆ ಮಾಡಿದ್ದೆ. ರೈಲ್ವೆ ಅಧಿಕಾರಿಗಳನ್ನು ಸಾಕ್ಷಿದಾರರಾಗಿ ಮಾಡಿರುವುದಿಲ್ಲ. ಸಾಕ್ಷಿ ಶ್ರೀಕಾಂತ್ ನಿಡಿ–10 ರ ಪ್ರಕಾರ ಹೇಳಿಕೆ ಕೊಟ್ಟಿದ್ದನು. ಈ ಪ್ರಕರಣಕ್ಕೆ ನನ್ನ ಮತ್ತು ಜಿ ರವಿ ರವರ ಪಾತ್ರ ಇರುತ್ತದೆ ಎಂದರೆ

ಸರಿಯಲ್ಲ. ಅದೇ ಕಾರಣಕ್ಕೆ ಜಿ ರವಿ ಗೆ ಗೊತ್ತಿರುವವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಈ ಪ್ರಕರಣದ ಪಿರ್ಯಾದುದಾರರಾಗಲೀ ಸಾಕ್ಷಿದಾರರಿಗಗಾಲೀ ಕೆಲಸ ಕೊಡಿಸುತ್ತೇನೆ ಎಂದು ಹೇಳಿ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧವಾಗಿ ಸುಳ್ಳು ದೋಷರೋಪಣಾ ಪತ್ರ ವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2009 ನೇ ಇಸವಿಯಿಂದ 2011 ನೇ ಇಸವಿಯವರೆಗೆ ಪೊಲೀಸಿ ನಿರೀಕ್ಷಕನಾಗಿ ಸರಸ್ವತಿಪುರಂ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೆನು. ನಾನು ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಇದ್ದಾಗ ಜಿ ರವಿ ರವರು ಆರೋಪಿತರ ವಿರುದ್ಧವಾಗಿ ಒಂದು ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ನಾನು ಯಾವ ಯಾವ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆಯೋ ಅಲ್ಲಲ್ಲಿ ಜಿ ರವಿ ರವರು ದೂರನ್ನು ಕೊಟ್ಟು ಆರೋಪಿತರ ವಿರುದ್ಧವಾಗಿ ಸುಳ್ಳು ಪ್ರಕರಣವನ್ನು ದಾಖಲಿಸುವಂತೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು